ಅಸಲು ದಾವೆ ಸಂಃ 46/2018
ಪಿ.ಡಬ್ಲ್ಯೂಃ1

ಈ ದಿನ ದಿನಾಂಕಃ 22-08-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ**

ಜಿ ಎನ್ ಚಂದ್ರಪ್ಪ ನವರ ಮಕ್ಕಳ ಪೈಕಿ ನನ್ನ ತಂದೆಯಾದ ಜಿ ನರೇಂದ್ರಪ್ಪ ನವರೇ ದೊಡ್ಡವರು ಎಂದರೆ ಸರಿ. ಜಿ ಬಸವರಾಜು , ಜಿ ಸಿ ರಾಜಶೇಖರ್ , 6 ರಿಂದ 9 ನೇ ಪ್ರತಿವಾದಿಗಳು ಕಿರಿಯರು ಎಂದರೆ ಸರಿ. ಮೂರು ಮತ್ತು ನಾಲ್ಕನೆ ದಾವಾಸ್ತಿಗಳು ಅರೆಹಳ್ಳಿಯಲ್ಲಿ ಇವೆ ಎಂದರೆ ಸರಿ. 1 , 2 , 5 ಮತ್ತು 6 ನೇ ದಾವಾಸ್ತಿಗಳು ಹಾಗೂ ಲಿಖಿತ

ತಕರಾರಿನ ಷೆಡ್ಯೂಲ್ ನಲ್ಲಿ ನಮೂದಿಸಿದ ಆಸ್ತಿಗಳು ಕತ್ತಲಗೆರೆ ಗ್ರಾಮದಲ್ಲಿ ಇವೆ ಎಂದರೆ ಸರಿ. 1 ರಿಂದ 4ನೇ ದಾವಾಸ್ತಿಗಳು ವ್ಯವಸಾಯದ ಜಮೀನುಗಳಾಗಿದ್ದು ಭತ್ತ ಬೆಳೆಯುತ್ತೇವೆ ಎಂದರೆ ಸರಿ. ಲಿಖಿತ ತಕರಾಗಿನ ಷೆಡ್ಯೂಲ್ ನಲ್ಲಿ ನಮೂದಿಸಿದ ಆಸ್ತಿಯ ಅರ್ಧ ಭಾಗದಲ್ಲಿ ಅಡಿಕೆ ಮತ್ತು ತೆಂಗು ಬೆಳೆಯುತ್ತೇವೆ ಎಂದರೆ ಸರಿ. ಉಳಿದ ಅರ್ಧ ಭಾಗದಲ್ಲಿ ಭತ್ತ ಬೆಳೆಯುತ್ತೇವೆ ಎಂದರೆ ಸರಿ. ಸದರಿ ಎಲ್ಲಾ ಆಸ್ತಿಗಳು ಮೂಲತಃ ನನ್ನ ಅಜ್ಜನ ಹೆಸರಿಲ್ಲಿ ಇದ್ದವು ಎಂದರೆ ಸಾಕ್ಷಿ ಸ.ನಂ.8, 9 ಹರೇಹಳ್ಳಿಯ ಜಮೀನು , ಸ.ನಂ.209/2 , 38 ಕತ್ತಲಗೆರೆಯ ಜಮೀನುಗಳು 4 ಜಮೀನುಗಳು ನನ್ನ ಅಜ್ಜ ಚಂದ್ರಪ್ಪನ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ಸ.ನಂ.220/2 ರ ಜಮೀನು ನನ್ನ ಮುತ್ತಜ್ಜ ನಾದ ನಂಜಪ್ಪ ಗೌಡ ರವರ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ಸದರಿ ನಂಜಪ್ಪ ಗೌಡ ನನ್ನ ಅಜ್ಜನಾದ ಚಂದ್ರಪ್ಪ ಗೌಡನ ತಂದೆ ಎಂದರೆ ಸರಿ. ಹಾಗಾಗಿ ಸದರಿ ಎಲ್ಲಾ ಆಸ್ತಿಗಳು ಸಹ ಪಿತ್ರಾರ್ಜಿ ತ ಆಸ್ತಿಗಳು ಎಂದರೆ ಸರಿ. ನನ್ನ ಅಜ್ಜ ಮೃತಪಟ್ಟ ತರುವಾಯ ಸದರಿ ಆಸ್ತಿಗಳು ನಮ್ಮ ಒಟ್ಟು ಕುಟುಂಬದಲ್ಲೇ ಮುಂದುವರಿಯುತ್ತವೆ ಎಂದರೆ ಸರಿ.

ಚಂದ್ರಪ್ಪ ಗೌಡರ ಮಕ್ಕಳಾದ ಜಿ ಎನ್ ನರೇಂದ್ರಪ್ಪ , ಜಿ ಸಿ ಬಸವರಾಜು ಮತ್ತು ಜಿ ಸಿ ರಾಜಶೇಖರ್ ರವರು ಮೃತಪಟ್ಟ ತರುವಾಯ ಅವರ ವಾರಸುದಾರರ ಹೆಸರಿಗೆ ಸದರಿ ಎಲ್ಲಾ ಆಸ್ತಿಗಳು ಜಂಟಿ ಖಾತೆ ಆಗಿವೆ ಎಂದರೆ ಸರಿ. ಸದರಿ ಎಲ್ಲಾ ಆಸ್ತಿಗಳಲ್ಲಿ 7 ರಿಂದ 9 ನೇ ಪ್ರತಿವಾದಿಗಳಿಗೆ ಯಾವುದೇ ಭಾಗವನ್ನಾಗಲೀ ಅಥವಾ ಯಾವುದೇ ಆದಾಯವನ್ನಾಗಲೀ ಕೊಟ್ಟಿಲ್ಲ ಎಂದರೆ ಸರಿ.

ಎದುರು ಕ್ಲೇಮ್ ಷೆಡ್ಯೂಲ್ ಆಸ್ತಿಯನ್ನು ನಾನು ಯಾರಿಗೂ ತಿಳಿಯದಂತೆ ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಖಾತೆ ಬದಲಾವಣೆ ಸಮಯಕ್ಕೆ 7 ರಿಂದ 9 ನೇ ಪ್ರತಿವಾದಿಗಳು ತಾಲ್ಲೂಕು ಕಚೇರಿಗೆ ತಕರಾರನ್ನು ಸಹ ಸಲ್ಲಿಸಿದ್ದರೂ ಎಂದರೆ ಸರಿ. ಹಾಗಾಗಿ ಸದರಿ ಎಲ್ಲಾ ಆಸ್ತಿಗಳಲ್ಲಿ ಚಂದ್ರಪ್ಪ ಗೌಡನ ಮಕ್ಕಳಾದ ಏಳು ಜನರಿಗೂ ಸಹ ಸಮನಾದ ಹಿಸ್ಸೆಹಕ್ಕು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಚಂದ್ರಪ್ಪ ಗೌಡನ ಆಸ್ತಿಯಲ್ಲಿ ಹಕ್ಕು ಇದೆ ಎಂದು ನುಡಿಯುತ್ತಾರೆ. ಸದರಿ ದಾವಾಸ್ತಿಗಳು ಮತ್ತು ಎದುರುಕ್ಲೇಮ್ ಷೆಡ್ಯೂಲ್ ಆಸ್ತಿಗಳಲ್ಲಿ ಚಂದ್ರಪ್ಪ ಗೌಡನ ವಾರಸುದಾರರಿಗೆ ಸಮನಾದ ಹಿಸ್ಸಾ ಹಕ್ಕು ಇದೆ ಎಂದರೆ ಸರಿಯಲ್ಲ. ಎದುರುಕ್ಲೇಮ್ ಆಸ್ತಿ ನನ್ನ ತಾಯಿ ಸ್ವಯಾರ್ಜಿತವಾಗಿ ಖರೀದಿ ಮಾಡಿದ ಆಸ್ತಿ ಅಲ್ಲ ಎಂದರೆ ಸರಿ. ಸದರಿ ಆಸ್ತಿ ಪಿತ್ರಾರ್ಜಿವಾಗಿ ಬಂದಂತಹ ಆಸ್ತಿ ಎಂದರೆ ಸಾಕ್ಷಿ ನನ್ನ ತಂದೆಗೆ ಬಂದಿದೆ ಎಂದು ನುಡಿಯುತ್ತಾರೆ.

**ಮರುವಿಚಾರಣೆ ಇರುವುದಿಲ್ಲ .**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.